**ಸಾಕ್ಷಿಯನ್ನು ದಿನಾಂಕ: 20.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾಧಿ ಪರ ವಕೀಲರಿಂದ

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾಧಿ ಪರ ವಕೀಲರಿಂದಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿಃ 01.04.2024 ರಿಂದ 31.03.2025 ರ ವರೆಗಿನ ಬ್ಯಾಂಕ್ ಆಫ್ ಬರೋಡದ ಬ್ಯಾಂಕ್ ಸ್ಟೇಟ್ಮೆಂಟನ್ನು (70 ಪುಟಗಳು) ನಿಪಿ - 6 ಎಂದು,
2. 12 ವಾಹನಗಳ ಆರ್.ಸಿ ಕಾರ್ಡಿನ ನೋಟರೈಸ್ಡ್ ಪ್ರತಿಗಳನ್ನು ನಿಪಿ - 7 ರಿಂದ 18 ಎಂದು,
3. ಐ.ಸಿ.ಐ.ಸಿ ಐ ಬ್ಯಾಂಕಿನ ದಿಃ 01.04.2024 ರಿಂದ 30.04.2024 ರ ವರೆಗಿನ ಸಮರಿ ಆಫ್ ಅಕೌಂಟನ್ನು ನಿಪಿ - 19 ಎಂದು,
4. ಐ.ಸಿ.ಐ.ಸಿ ಐ ಬ್ಯಾಂಕಿನ ದಿಃ 01.07.2024 ರಿಂದ 31.07.2024 ರ ವರೆಗಿನ ಸಮರಿ ಆಫ್ ಅಕೌಂಟನ್ನು ನಿಪಿ - 20 ಎಂದು,
5. ಐ.ಸಿ.ಐ.ಸಿ ಐ ಬ್ಯಾಂಕಿನ ದಿಃ 01.05.2024 ರಿಂದ 31.05.2024 ರ ವರೆಗಿನ ಸಮರಿ ಆಫ್ ಅಕೌಂಟನ್ನು ನಿಪಿ - 21 ಎಂದು,
6. ಐ.ಸಿ.ಐ.ಸಿ ಐ ಬ್ಯಾಂಕಿನ ದಿಃ 01.06.2024 ರಿಂದ 30.06.2024 ರ ವರೆಗಿನ ಸಮರಿ ಆಫ್ ಅಕೌಂಟನ್ನು ನಿಪಿ - 22 ಎಂದು,
7. ದೂರುದಾರರಿಗೆ ಸಂಬಂಧಿಸಿದ 2024-25 ರ ಆದಾಯ ತೆರಿಗೆ ಸ್ವೀಕೃತಿಯನ್ನು ನಿಪಿ - 23 ಎಂದು,
8. ದೂರುದಾರರಿಗೆ ಸಂಬಂಧಿಸಿದ 2024-25 ರ ಆದಾಯ ತೆರಿಗೆ ಸ್ಟೇಟ್ಮೆಂಟ್ ನ ನೋಟರೈಸ್ಡ್ ಪ್ರತಿಯನ್ನು ನಿಪಿ - 24 ಎಂದು,
9. ದೂರುದಾರರಿಗೆ ಸಂಬಂಧಿಸಿದ 2024-25 ರ ಆದಾಯ ಮತ್ತು ನಷ್ಟದ ದಾಖಲೆಯ ನೋಟರೈಸ್ಡ್ ಪ್ರತಿಯನ್ನು ನಿಪಿ - 25 ಎಂದು,
10. ದೂರುದಾರರಿಗೆ ಸಂಬಂಧಿಸಿದ 2024-25 ರ ಬ್ಯಾಲನ್ಸ್ ಶೀಟ್ ದಾಖಲೆಯ ನೋಟರೈಸ್ಡ್ ಪ್ರತಿಯನ್ನು ನಿಪಿ - 26 ಎಂದು,

11. ದೂರುದಾರರಿಗೆ ಸಂಬಂಧಿಸಿದ 2024-25ರ ಸಮರಿ ಆಫ್ ಕ್ಯಾಪಿಟಲ್ ಅಕೌಂಟ್ ದಾಖಲೆಯ ನೋಟರೈಸ್ಡ್‌ಪ್ರತಿಯನ್ನು ನಿಪಿ - 27 ಎಂದು,
12. ದೂರುದಾರರಿಗೆ ಸಂಬಂಧಿಸಿದ 2024-25ರ ಅಸೆಟ್ಸ್ ಮತ್ತು ಡಿಪ್ರಿಶಿಯೆಶನ್ ದಾಖಲೆಯನೋಟರೈಸ್ಡ್‌ಪ್ರತಿಯನ್ನು ನಿಪಿ - 28 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ಆರೋಪಿಯು ನನಗೆ 5 ವರ್ಷದಿಂದ ವೆಂಕಟೇಶ ಮತ್ತು ಬಾಲು ಎಂಬ ಸ್ನೇಹಿತರ ಕಡೆಯಿಂದ ಪರಿಚಯ ಆಗಿರುತ್ತಾರೆ.
2. 5 ವರ್ಷದಿಂದ ನೀವು ಯಾವತ್ತಾದರೂ ಅವರ ಮೊಬೈಲಿಗೆ ಕಾಲ್ ಮಾಡಿ ಮಾತಾಡಿದ್ದೀರಾ ಎಂದರೆ ಇಲ್ಲ, ಅವರ ಜೊತೆ ನೇರವಾಗಿ ಮಾತನಾಡಿರುತ್ತೇನೆ.
3. ನಾನು ಆರೋಪಿ ಮನೆಗೆ ಯಾವತ್ತೂ ಹೋಗಿಲ್ಲ. ಅವರ ಕುಟುಂಬದವರು ಯಾರೂ ನನಗೆ ಪರಿಚಯಲ್ಲ.
4. ಆರೋಪಿ ನಮ್ಮ ಮನೆಗೆ ಹಣ ಪಡೆಯಲು ದಿಃ 01.07.2024 ರಂದು ಬಂದಿದ್ದರು. ಅವರ ಕಛೇರಿಗೆ ನಾನು ಹೋಗಿಲ್ಲ.
5. ಆರೋಪಿ ಆರ್.ವಿ ರಿಕವರಿ ಏಜೆನ್ಸಿ ಎಂಬ ಕಂಪನಿ ನಡೆಸುತ್ತಿದ್ದಾರೆ. ಸದರಿ ಸಂಸ್ಥೆಗೆ ನಾನು ಹೋಗಿಲ್ಲ, ಸದರಿ ವಿಚಾರವನ್ನು ಆರೋಪಿ ಮತ್ತು ವೆಂಕಟೇಶ ರವರು ಹೇಳಿರುತ್ತಾರೆ.
6. ಇವತ್ತಿನವರೆಗೆ ನಿಮ್ಮ ಖಾತೆಯಿಂದ ಅವರ ಖಾತೆಗೆ ಅಥವಾ ಆರೋಪಿ ಖಾತೆಯಿಂದ ನಮ್ಮ ಖಾತೆಗೆ ಯಾವುದೇ ವರ್ಗಾವಣೆ ಆಗಿಲ್ಲ.
7. ನೀವು ಹಾಜರುಪಡಿಸಿದ ದಾಖಲೆಗಳಲ್ಲಿ ಆರೋಪಿಗೆ ಹಣ ನೀಡಿದ ಬಗ್ಗೆ ನಮೂದು ಇದೆಯಾ ಎಂದರೆ, ಇಲ್ಲ.
8. ಆರೋಪಿಯ ಮೊಬೈಲ್ ನಂಬರ್ ನನ್ನ ಬಳಿ ಇದೆ. ಆರೋಪಿಯೇ ನಂಬರ್ ನೀಡಿರುತ್ತಾರೆ. ಅವರ ನಂಬರ್ ಯಾವ ದಿನಾಂಕದಂದು ನೀಡಿದರು ಎಂದು ನನಗೆ ನೆನಪಿಲ್ಲ. ಸದರಿ ಮೊಬೈಲ್ ನಂಬರ್ ಈಗಲೂ ನನ್ನ ಬಳಿ ಇದೆ. ನನಗೆ ನೆನಪಿಲ್ಲ.

9. ನಾನು TRNS Chicken Center ಎಂದು ಕೋಳಿ ವ್ಯಾಪಾರ ಮಾಡುತ್ತೇನೆ. ವ್ಯಾಪಾರದಲ್ಲಿ ನಾನು ಲೆಕ್ಕಪತ್ರ ಇಟ್ಟುಕೊಳ್ಳುತ್ತೇನೆ. ಆ ಬಗ್ಗೆ ನನಗೆ ಪರವಾನಿಗೆ ಇದೆ. ಅದನ್ನು ಹಾಜರುಪಡಿಸಿಲ್ಲ.

10. ಕೋಳಿ ವ್ಯಾಪಾರದಿಂದ ಬಂದ ಆದಾಯ ಆಕ್ಸಿಸ್ ಬ್ಯಾಂಕ್ ಐಸಿಐಸಿಐ ಬ್ಯಾಂಕ್ ಹಾಗೂ ಬ್ಯಾಂಕ್ ಆಫ್ ಬರೋಡ ಖಾತೆಗಳಿಗೆ ಹಾಕುತ್ತೇನೆ.

11. ಸದರಿ ಮೂರು ಅಕೌಂಟ್ ಗಳಲ್ಲಿ ನಾನು ಆರೋಪಿಗೆ ಹಣ ನೀಡಿದ ಬಗ್ಗೆ ನಮೂದು ಇಲ್ಲ.

12. ನಮ್ಮ ಕೋಳಿ ವ್ಯಾಪಾರ ಸಂಸ್ಥೆ ಸಲುವಾಗಿ ನಾನು ಆದಾಯ ತೆರಿಗೆ ಮಾಡುತ್ತೇನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳಲ್ಲಿ ನಾನು ಆರೋಪಿಗೆ ಹಣ ನೀಡಿದ ಬಗ್ಗೆ ನಮೂದು ಇಲ್ಲ.

13. ನಾನು ವೈಯಕ್ತಿಕವಾಗಿ ಕಟ್ಟುವ ಆದಾಯ ತೆರಿಗೆ ಯಲ್ಲಿ ಆರೋಪಿಗೆ ಹಣ ನೀಡಿದ ಬಗ್ಗೆ ನಮೂದು ಇಲ್ಲ.

14. ನಿಮ್ಮ ಬಳಿ ಆರೋಪಿಗೆ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ, ಚೆಕ್ ಪಡೆದಿದ್ದೇನೆ, ಲಿಖಿತ ದಾಖಲೆ ಇಲ್ಲ.

15. ನನಗೆ ವಯಕ್ತಿಕವಾಗಿ ಎಸ್.ಬಿ.ಐ ಹಾಗೂ ಬ್ಯಾಂಕ್ ಆಫ್ ಬರೋಡ ದಲ್ಲಿ ಖಾತೆ ಇದೆ. ಅವುಗಳಲ್ಲಿ ಆರೋಪಿಗೆ ಹಣ ನೀಡಿದ ಬಗ್ಗೆ ನಮೂದು ಇಲ್ಲ.

16. ನಾನು ಆರೋಪಿಗೆ ದಿಃ 01.07.2024 ರಂದು ಹಣ ನೀಡಿದ್ದೆ. ಅದೇ ದಿನ ಅವರು ದಿಃ 01.08.2024 ರ ದಿನಾಂಕ ನಮೂದು ಮಾಡಿ ಚೆಕ್ ನೀಡಿರುತ್ತಾರೆ.

17. ದಿಃ 01.07.2024 ರಂದು ನಿಮ್ಮ ಯಾವುದಾದೂ ಖಾತೆಯಿಂದ ಹಣ ಡ್ರಾ ಮಾಡಿ ಆರೋಪಿಗೆ ನೀಡಿದ್ದೀರಾ ಎಂದರೆ, ಇಲ್ಲ. ದಿನನಿತ್ಯದ ಕೋಳಿ ವ್ಯಾಪಾರದಿಂದ ಬಂದ ಹಣ ನೀಡಿರುತ್ತೇನೆ.

18. ಒಂದು ದಿನಕ್ಕೆ ಕೋಳಿ ವ್ಯಾಪಾರದಿಂದ ಬರುವ ಆದಾಯದ ಬಗ್ಗೆ ದಾಖಲೆ ಇಟ್ಟುಕೊಂಡಿದ್ದೀರಾ, ಇಟ್ಟುಕೊಂಡಿದ್ದರೆ ಅದನ್ನು ಹಾಜರುಪಡಿಸಿದ್ದೀರಾ ಎಂದರೆ, ಇದೆ. ಬುಕ್ಕಿನಲ್ಲಿ ಬರೆದು ಖಾತೆಗೆ ಹಾಕುತ್ತೇನೆ, ಅದನ್ನು ಹಾಜರುಪಡಿಸಿದ್ದೇನೆ.

19. ನಮ್ಮ ಸಂಸ್ಥೆಯಲ್ಲಿ ದಿನನಿತ್ಯ ಆಗುವ ವಹಿವಾಟನ್ನು ಬುಕ್ಕಿನಲ್ಲಿ ನಮೂದು ಮಾಡುತ್ತೇನೆ.

20. ಜೀವಂತ ಕೋಳಿಗಳನ್ನು ಮಾರಾಟ ಮಾಡುತ್ತೇವೆ. ಅದಕ್ಕೆ ಜಿ.ಎಸ್.ಟಿ ಕಟ್ಟಬೇಕು ಎಂದರೆ, ಇಲ್ಲ ಎಂದು ನುಡಿಯುತ್ತಾರೆ.

21. ದಿಃ 01.07.2024 ರಂದು 15 ಲಕ್ಷ ನಮ್ಮ ಸಂಸ್ಥೆಯಲ್ಲಿ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ, 4 ದಿನದ ಕಲೆಕ್ಷನ್ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಲೆಕ್ಷನ್ ಯಾರಿಂದ ಬಂದಿದೆ ಎಂದು ದಾಖಲೆ ಇದೆ. ಅದನ್ನು ಹಾಜರುಪಡಿಸಬಹುದು.

22. ದೊಡ್ಡ ದೊಡ್ಡ ಮೊತ್ತವನ್ನು ನಗದು ಮೂಲಕ ಬೇರೆ ಯಾರಿಗೆ ನೀಡಿದ್ದೀರಾ ಎಂದರೆ, ಬೇರೆ ಯಾರಿಗೂ ನೀಡಿಲ್ಲ.

23. ದೊಡ್ಡ ಮೊತ್ತವನ್ನು ನಗದು ಮೂಲಕ ನೀಡಬಾರದು ಎಂದು ನಿಮಗೆ ಗೊತ್ತು ಎಂದರೆ, ನನಗೆ ಗೊತ್ತಿಲ್ಲ.

24. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

25. ನಿಮಗೆ ಚೆಕ್ ಮೂಲಕ ವ್ಯವಹಾರ ಮಾಡಿ ಅನುಭವ ಇದೆ ಎಂದರೆ ಸರಿ.

26. ಖಾತೆ ಮೂಲಕ ಹಣ ವರ್ಗಾವಣೆ ಮಾಡುವುದು ಸಹ ನಿಮಗೆ ಅನುಭವ ಇದೆ ಎಂದರೆ ಸರಿ.

27. ವೆಂಕಟೇಶ ಬಳಿ ನೀವು ಆರೋಪಿಯ ಖಾತೆ ಸಂಖ್ಯೆಯನ್ನು ಕೇಳಿದ್ದೀರಾ ಎಂದರೆ, ಇಲ್ಲ.

28. 15 ಲಕ್ಷ ಮೊತ್ತವನ್ನು ಆರೋಪಿಗೆ ನನ್ನ ಮನೆಯಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ಎಲ್ಲಿಂದ ತಂದು ಮನೆಯಲ್ಲಿ ಇಟ್ಟಿದ್ದೀರಿ ಎಂದರೆ, ಇಲ್ಲ.

29. ಆರೋಪಿ ಮನೆ ಖರೀದಿಸಬೇಕು ಎಂದು ಹೇಳಿ ನನ್ನ ಬಳಿ ಹಣ ಪಡೆದಿದ್ದರು.

30. ಆರೋಪಿಯ ಮನೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಆ ಮೊದಲು ಮನೆ ಇತ್ತಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ.

31. ಆರೋಪಿ ಮನೆ ಖರೀದಿ ಮಾಡುವ ಬಗ್ಗೆ ನನಗೆ ದಾಖಲೆ ತೋರಿಸಿಲ್ಲ. ಆರೋಪಿಯೇ ನನಗೆ ಮನೆ ಖರೀದಿ ಮಾಡಬೇಕು ಎಂದು ತಿಳಿಸಿದ್ದರು.

32. ವೆಂಕಟೇಶರವರ ತಾಯಿಯ ಹೆಸರು ಶ್ರೀಮತಿ ಎಂದರೆ ನನಗೆ ಗೊತ್ತಿಲ್ಲ.

33. ನಿಮ್ಮ ಮೇಲೆ ಆರೋಪಿ ಪೊಲೀಸ್ ದೂರು ನೀಡಿದ್ದಾರಾ ಎಂದರೆ, ಇಲ್ಲ, ಆದರೆ ವಕೀಲರ ಮೂಲಕ ಒಂದು ನೊಟೀಸು ಬಂದಿತ್ತು ಅದಕ್ಕೆ ವಕೀಲರ ಮೂಲಕ ಉತ್ತರ ನೀಡಿರುತ್ತೇನೆ.

34. ವೆಂಕಟೇಶ ರಾವ್ ಬಿನ್ ವಾಸುದೇವ ರಾವ್ ಎಂದರೆ ನಿಮ್ಮ ಸ್ನೇಹಿತ ವೆಂಕಟೇಶ ಎಂದರೆ ಸರಿ.

35. ವೆಂಕಟೇಶ ರಾವ್ ಮತ್ತು ನೀವು ಸೇರಿ ವ್ಯಾಪಾರ ಮಾಡುತ್ತೀರಾ ಎಂದರೆ, ಇಲ್ಲ ಸ್ನೇಹಿತರ ಮಾತ್ರ ಎಂದು ನುಡಿಯುತ್ತಾರೆ.

36. ವೆಂಕಟೇಶ ಮತ್ತು ಆರೋಪಿ ನಡುವೆ ಏನು ವ್ಯವಹಾರ ಇತ್ತು ನನಗೆ ವೆಂಕಟೇಶ ರವರು ಹೇಳಿರುವುದಿಲ್ಲ.

37. ನಿಪಿ - 1 ರ ಚೆಕ್ಕು ಆರೋಪಿ ರಾಜೇಶ ರವರಿಗೆ ಸೇರಿದ್ದು. ಆರೋಪಿ ರಾಜೇಶ ರವರ ತಮ್ಮ ನವೀನ ರವರ ಪರಿಚಯ ನನಗೆ ಇಲ್ಲ.

38. ನಿಪಿ - 1 ರ ಚೆಕ್ಕು ಯಾವ ಕಾರಣಕ್ಕೆ ಅಮಾನ್ಯಗೊಂಡಿದೆ ಎಂದರೆ, ಅಕೌಂಟ್ ಬ್ಲಾಕ್ ಆಗಿದೆ ಎಂದು ಅಮಾನ್ಯವಾಗಿದೆ.

39. ನಿಪಿ -1 ರ ಚೆಕ್ಕು 2012-13 ರ ಹಳೆಯ ಚೆಕ್ಕು ಎಂದರೆ ನನಗೆ ಗೊತ್ತಿಲ್ಲ.

40. ನಿಪಿ - 1 ರ ಖಾತೆ ನವೀನ ಮತ್ತು ರಾಜೇಶ ರವರ ಜಂಟಿ ಖಾತೆಗೆ ಸೇರಿದ ಚೆಕ್ಕಾಗಿದ್ದು, ಅದಕ್ಕೆ ಇಬ್ಬರ ಸಹಿಗಳು ಇದ್ದರೆ ಮಾತ್ರ ಮಾನ್ಯವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

41. ನಿಪಿ - 1 ಕ್ಕೆ ಸಂಬಂಧಪಟ್ಟ ಉಳಿದ ಎಲ್ಲಾ ಚೆಕ್ಕುಗಳು 2013 ರಲ್ಲಿ ಬೇರೆ ಬೇರೆ ವ್ಯಕ್ತಿಗಳಿಗೆ ನೀಡಿ ನಗದೀಕರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ನಿಪಿ - 1 ರ ಚೆಕ್ಕನ್ನು ನೀವು

ದುರುಪಯೋಗಪಡಿಸಿಕೊಂಡು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

42. ನಿಪಿ - 1 ರಲ್ಲಿರುವ ಬರವಣಿಗೆಗೆ ಹಾಗೂ ನಿಪಿ - 1(ಎ)ರ ಸಹಿಯ ಶಾಯಿಗೆ ವ್ಯತ್ಯಾಸ ಇದೆ ಎಂದರೆ, ಅವರ ಜೊತೆ ಬಂದ ಅವರ ಸ್ನೇಹಿತ ಬರವಣಿ ಮಾಡಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಸಹಿ ಮಾತ್ರ ಆರೋಪಿ ಮಾಡಿದ್ದರು. ಅವುಗಳ ಶಾಯಿಗೆ ವ್ಯತ್ಯಾಸ ಇದೆ ಎಂದರೆ, ನನಗೆ ಗೊತ್ತಿಲ್ಲ.

43. ನಿಪಿ - 1 ರಲ್ಲಿರುವ ಬರವಣಿಗೆಯನ್ನು ನೀವೇ ಬರೆದಿರುತ್ತೀರಾ ಎಂದರೆ ಸರಿಯಲ್ಲ.

44. ನಿಪಿ - 1 ರ ಚೆಕ್ಕನ್ನು ನೀಡುವ ಸಮಯದಲ್ಲಿ ವೆಂಕಟೇಶ ಹಾಜರಿದ್ದರಾ ಎಂದರೆ ಇರಲಿಲ್ಲ. ವೆಂಕಟೇಶ ರವರಿಗೆ ಈ ಪ್ರಕರಣದ ಬಗ್ಗೆ ಗೊತ್ತು.

45. ನಿಪಿ -1 ರ ಚೆಕ್ಕು ಅಮಾನ್ಯವಾಗುವ ಮುಂಚೆ ಆರೋಪಿ ಚೆಕ್ ನೀಡಿರುವುದು ವೆಂಕಟೇಶ ರವರಿಗೆ ಗೊತ್ತಿತ್ತಾ ಎಂದರೆ, ಗೊತಿತ್ತು.

46. ಆರೋಪಿಯ ವಿಳಾಸ ಇರುವ ಯಾವುದೇ ದಾಖಲೆ ನನ್ನ ಬಳಿ ಇರುವುದಿಲ್ಲ.

47. 15 ಲಕ್ಷ ಕೊಡುವ ಸಮಯದಲ್ಲಿ ಆರೋಪಿಯ ವಿಳಾಸದ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ, ನನಗೆ ವಿಳಾಸ ಗೊತ್ತಿತ್ತು ಎಂದು ನುಡಿಯುತ್ತಾರೆ.

48. ದೂರಿನಲ್ಲಿ ಬರೆಸಿದ ವಿಳಾಸಕ್ಕೆ ನಾನು ಯಾವತ್ತೂ ಹೋಗಿಲ್ಲ.

49. 15 ಲಕ್ಷ ಹಣ ಕೋಳಿ ವ್ಯಾಪಾರದಿಂದ ಬಂದ ಹಣ ಎಂದು ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೆ. ಆ ಬಗ್ಗೆ ದೂರಿನಲ್ಲಿ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

50. ವೆಂಕಟೇಶ ರವರ ಮನೆಗೆ ನಾನು ಹೋಗಿಲ್ಲ. ಅವರೇ ಇಲ್ಲಿಗೆ ಬರುತ್ತಿದ್ದರು.

51. ವೆಂಕಟೇಶ ಮತ್ತು ನೀವು ಯಾವ ಉದ್ದೇಶಕ್ಕೆ ಪರಿಚಯವಾದರು ಎಂದರೆ, ಮೊದಲಿನಿಂದಲೂ ಅವರು ಇನ್ನೊಬ್ಬ ರಾಜೇಶ ಎಂಬುವವರಿಂದ ಪರಿಚಯ. ಸದರಿ ಇನ್ನೊಬ್ಬ ರಾಜೇಶ ರವರು ಐಟಿ ಕಂಪನಿ ನಡೆಸುತ್ತಿದ್ದಾರೆ. ಸದರಿ ರಾಜೇಶ ಹಾಗೂ ವೆಂಕಟೇಶ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ.

52. ನಿಪಿ - 1 ರ ಚೆಕ್ ಕೊಡುವ ಸಮಯದಲ್ಲಿ ಯಾವುದೇ ಲಿಖಿತ ದಾಖಲೆ ಮಾಡಿಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಪಿರಿಯಾಪಟ್ಟಣ.